## ಇಲ್ಲಿಯವರೆಗೆ



ಹರಿಕೃಷ್ಣರ ಧ್ಯಾನಮಂದಿರದೊಳಗೆ ರಮ್ಯ, ಋತು ಹೋಗಿ ನೋಡುತ್ತಾರೆ. ಅಲ್ಲಿ ಗೋಡೆಯ ಮೇಲೆ ತೂಗು ಹಾಕಿದ್ದ ಹೆಣ್ಣೊಬ್ಬಳ ಭಾವಚಿತ್ರ ನೋಡಿ ಋತು ಆಶ್ಚರ್ಯಚಕಿತಳಾಗುತ್ತಾಳೆ. ಇದು ತನ್ನ ತಾಯಿಯದೇ ಚಿತ್ರ ಎಂದು ರಮ್ಯಳಿಗೆ ಹೇಳುತ್ತಾಳೆ. ಇದರ ಹಿಂದಿನ ರಹಸ್ಯ ತಿಳಿಯುವ ಕೌತುಕ ಋತುವಿಗೆ. ಅತ್ತ ಹೇಮಂತ ಋತುವಿಗೆ ಫೋನ್ ಮಾಡಿ 'ಸರ್‌ಪ್ರೈಸ್' ಇದೆ. ಬೆಂಗಳೂರಿಗೆ ಬಂದಾಗ ಹೇಳುವೆ ಎನ್ನುತ್ತಾನೆ. ಮರುದಿನವೇ ಋತು, ರಮ್ಯ ಬೆಂಗಳೂರಿಗೆ ಹೋಗಲು ಸಿದ್ಧರಾಗುತ್ತಾರೆ. ಈ ಮಧ್ಯೆ ಅಜಯ್ ಕುಲಕರ್ಣಿಗೆ ರಮ್ಯಳ ಮೇಲೆ ಮೋಹ ಉಂಟಾಗುತ್ತದೆ, ರಮ್ಯಳ ಮನಸ್ಸಿನಲ್ಲೂ ಅಜಯ್ ಅನ್ನು ಮದುವೆಯಾಗುವ ಯೋಚನೆ ಮೂಡುತ್ತದೆ. ಕೊಲೆಗಾರನ ಸುಳಿವು ಸಿಕ್ಕಿದ ಸಂತಸದಲ್ಲಿ ಹೇಮಂತ ಇರುತ್ತಾನೆ.

ಭರತ ಮಗುವಿನಂತಿದ್ದಾನೆ. ಅವ್ನು ನಮ್ಮ ಹತ್ರ ಮಾತನಾಡ್ದೇ ಆಗ್ಲೇ ಎರಡು ವರ್ಷ ಆಯ್ತು, ಕೋಟೆ ಬಂಗ್ಲೇಲಿ ಮಂಕಾಗಿ ಕುಳಿತುಕೊಳ್ಳುವ ಅವ್ನು ಭೀಕರ ಕೊಲೆಗಳನ್ನು ಮಾಡ್ತಾನಾ....ನಾನ್ಸೆನ್ಸ್...' ಅವರ ಧ್ವನಿ ಬರುಬರುತ್ತಾ ಬಿರುಸಾಯಿತು.

'ಅಂಕಲ್, ಸಮಾಧಾನ, ನಿಮ್ಮ ಮಗ ಭರತನೇ ಸರಣಿ ಕೊಲೆಗಾರ ಅಂತ ಇನ್ವೆಸ್ಟಿಗೇಷನ್‌ನಿಂದ ಗೊತ್ತಾಗಿದೆ, ಹಾಗಾಗಿಯೇ ಅಜಯ್ ಕುಲಕರ್ಣಿ ಅವನನ್ನು ಆರೆಸ್ಟ್ ಮಾಡಿದ್ದಾರೆ...' ಹೇಮಂತ ಖಚಿತವಾಗಿ ಹೇಳಿದಾಗ ಪುರುಷೋತ್ತಮರು ಅವನತ್ತ ದುರುಗುಟ್ಟಿಕೊಂಡು ನೋಡಿದರು.

'ವಾಟ್ ಈಸ್ ದಿಸ್ ಹೇಮಂತ, ಕೋಟೆ ಬಂಗ್ಲೆಯ ಭಾವೀ ಅಳಿಯ ಅಂತ ನಿಂಗೆ ಸಲುಗೆ ಕೊಟ್ಟಿದ್ದಕ್ಕೆ ಅದನ್ನು ಸರಿಯಾಗಿಯೇ ಉಪಯೋಗಿಸಿಕೊಂಡೆ ಬಿಡು, ನಿಮ್ಮೆಲ್ಲರ ಮೇಲೆ ಪೊಲೀಸ್ ಡಿಪಾರ್ಟ್‌ಮೆಂಟ್‌ನಿಂದ ಪ್ರೆಷರ್ ಜಾಸ್ತಿಯಾಯ್ತು. ಅದಕ್ಕೆ ಏನೂ ಗೊತ್ತಿಲ್ಲದ ನನ್ನ ಮಗನನ್ನ ಕೊಲೆಗಾರನನ್ನಾಗಿ ಮಾಡ್ತಿದೀರ, ನಾನು ಸುಮ್ನೆ ಇರ್ತೀನಿ ಅಂತ ಅಂದುಕೊಂಡ್ರಾ, ಒಬ್ಬ ಕ್ರಿಮಿನಲ್ ಲಾಯರಾಗಿ ನಾನೇನು ಮಾಡ್ಬೇಕೂಂತ ನಂಗೆ ಚೆನ್ನಾಗಿ ಗೊತ್ತಿದೆ' ಪುರುಷೋತ್ತಮರು ಧ್ವನಿ ಏರಿಸಿ ಕೂಗಾಡ ತೊಡಗಿದಾಗ ಏನೋ ಹೇಳಲು ಬಾಯ್ತೆರೆದ ಹೇಮಂತ.

ಅದುವರೆಗೆ ಇವರೆಲ್ಲರ ಮಾತುಗಳನ್ನು ಕೇಳುತ್ತಿದ್ದ ಕಲಾವತಿಯ ಸಹನೆಯ ಕಟ್ಟೆಯೊಡೆದಿತ್ತು. ಧಾವಿಸಿ ಬಂದು ಹೇಮಂತನ ಕೆನ್ನೆಗೆರಡು ಬಾರಿಸಿದರು. 'ನಂಗೆ ನಿನ್ನ ಮೇಲೆ ಮೊದಲಿನಿಂದ್ಲೂ ಅನುಮಾನ ಇತ್ತು ಕಣೋ ಹೇಮಂತ, ಅಸಲಿಗೆ ನೀನು ನಮ್ಮ ಋತುವಿನ ಆ ಬಾಲ್ಯದ ಶ್ರೀನಿವಾಸ ಹೌದಾ ಎನ್ನುವುದೇ ಅನುಮಾನ, ಋತು ಈ ಕೋಟೆ ಬಂಗ್ಲೆಯ ಉತ್ತರಾಧಿಕಾರಿಣಿ, ಅವಳನ್ನು ಮದ್ವೆಯಾದ್ರೆ ಈ ಎಲ್ಲಾ ಆಸ್ತಿಯೂ ನಿಂಗೆ ಬರುತ್ತೆ, ಮನಸ್ಥಿಮಿತ ಕಳೆದುಕೊಂಡಿರುವ ನನ್ನ ಮಗನಿಂದ ಸದ್ಯಕ್ಕೆ ಯಾವುದೇ ತೊಂದರೆಯಿಲ್ಲ, ಆದ್ರೆ ಮುಂದೆ ಅವ್ನು ಸರಿಯಾದ್ರೆ....ಆಸ್ತಿಗೆ ನಿಜವಾದ ವಾರಸುದಾರ ಬಂದ್ಬಿಡ್ತಾನಲ್ಲ, ಅದಕ್ಕೆ ಪ್ಲಾನ್ ಮಾಡಿ ನೀನೀಗ ಭರತನನ್ನು ಅರೆಸ್ಟ್ ಮಾಡಿಸಿದ್ದಿ, ಒಬ್ಬರ ಹತ್ತಿರ ಮಾತನಾಡುವುದಕ್ಕೂ ಹೆದರುವ ನನ್ನ ಮಗ ಅದು ಹೇಗೆ ಅಂಥ ಭೀಕರ ಕೊಲೆಗಳನ್ನು ಮಾಡಲು ಸಾಧ್ಯ?....ನೀವೆಲ್ಲಾ ಸೇರಿಕೊಂಡು ಏನೋ ಸಂಚು ನಡೆಸ್ತಿದ್ದೀರಿ....' ಆವೇಶದಿಂದ ಕಲಾವತಿ ಕೂಗಾಡತೊಡಗಿದ್ದಳು.

'ಪುರುಷೋತ್ತಮರೇ, ನಿಮ್ಮ ಹೆಂಡ್ತಿ ಡಿಟೆಕ್ಟಿವ್ ಹೇಮಂತ ಕುಮಾರ್ ಮೇಲೆ ಕೈ ಮಾಡಿದ್ದಾರೆ, ಕಾನೂನನ್ನು ಕೈಗೆ ತೆಗೆದುಕೊಳ್ತಿದಾರೆ, ಲಾಯರಾಗಿರುವ ನಿಮ್ಗೆ ಹೆಚ್ಚಿಗೆ ಹೇಳುವ ನೆಸೆಸಿಟಿ ಇಲ್ಲ, ಹೇಮಂತ ಕುಮಾರನ ಮೇಲೆ ಕೈ ಮಾಡಿದ್ದಕ್ಕಾಗಿ ನಿಮ್ಮ ಹೆಂಡ್ತಿಯನ್ನು ಅರೆಸ್ಟ್ ಮಾಡ್ಬೇಕಾಗುತ್ತೆ, ಮೊದಲು ಅವರನ್ನು ಕಂಟ್ರೋಲ್ ಮಾಡಿ....' ಅಜಯ್ ಗುಡುಗಿದಾಗ ಪುರುಷೋತ್ತಮರು ನಿರ್ವಾಹವಿಲ್ಲದೆ ಕಲಾವತಿಯನ್ನು ತಮ್ಮ ಪಕ್ಕಕ್ಕೆ ಹಿಡಿದೆಳೆದುಕೊಂಡರು.

ಇದುವರೆಗೆ ಈ ಎಲ್ಲ ವಿದ್ಯಮಾನಗಳನ್ನು ಮಂಕನಂತೆ ನೋಡುತ್ತಾ ಕುಳಿತಿದ್ದ ಭರತನೀಗ ಅಜಯ್ ಕುಲಕರ್ಣಿಯ ಕೈ ತಪ್ಪಿಸಿಕೊಂಡು ಕೈ ಕೋಳದೊಂದಿಗೆ ಮಿಂಚಿನಂತೆ ಹೊರಗೋಡಿ, ಬಂಗಲೆಯ ವಿಶಾಲವಾದ ಆವರಣವನ್ನು ದಾಟಿದ. ಈ ಎಲ್ಲಾ ಪರಿಸ್ಥಿತಿಗಳಿಗೆ ಸಿದ್ಧರಾಗಿಯೇ ಇದ್ದ ಪೊಲೀಸರು ಹೊರಗೂ ಕಾವಲು ಕಾಯುತ್ತಿದ್ದರು. ಹೊರಗೋಡಿ ಬಂದ ಭರತನನ್ನು ಕ್ಷಣಾರ್ಧದಲ್ಲಿ ಹಿಡಿಯುವಲ್ಲಿ ಯಶಸ್ವಿಯಾದರು. ಅವನನ್ನು ಎಳೆದುಕೊಂಡು ಬಂಗಲೆಯೊಳಕ್ಕೆ ಬಂದು ಅಜಯ್ ಕುಲಕರ್ಣಿಯ ಮುಂದೆ ನಿಲ್ಲಿಸಿದರು.

ಅಜಯ್ ಛಟೀರನೆ ಭರತನ ಕೆನ್ನೆಗೊಂದು ಬಾರಿಸಿದ. 'ಭರತ್, ನಿನ್ನ ನಾಟಕವನ್ನು ಇಲ್ಲಿಗೇ ನಿಲ್ಲಿಸ್ಬಿಡು, ನೀನು ಮಾಡಿದ ಅಪರಾಧಗಳನ್ನು ನೀನೇ ಹೇಳ್ಬಿಡು, ಆಗ ಶಿಕ್ಷೆಯಾದ್ರೂ ಸ್ವಲ್ಪ ಕಮ್ಮಿಯಾಗುತ್ತೆ....' ನಿಧಾನವಾಗಿ ಆದರೆ ಅಧಿಕಾರಯುತವಾಗಿ ಹೇಳಿದ ಅಜಯ್.

'ಆಯ್ತು ಇನ್ಸ್‌ಪೆಕ್ಟರ್, ಎಲ್ಲವನ್ನೂ ಹೇಳಿಬಿಡ್ತೀನಿ, ಎರಡು ವರ್ಷಗಳಿಂದ ಹೀಗೆ ಮಂಕನಂತೆ ನಾಟಕ ಮಾಡಿ ನಂಗೂ ಸಾಕಾಗಿದೆ, ನಾಟಕ ಯಾವತ್ತಾದ್ರೂ ಮುಗಿಯಲೇಬೇಕಲ್ಲ, ಅದು ಇವತ್ತೇ ಮುಗಿದುಬಿಡ್ಲಿ..' ಭರತ ಸಹಜವಾಗಿಯೇ ಮಾತನಾಡಿದಾಗ ಎಲ್ಲರೂ ಬೆಚ್ಚಿದರು. ಕಲಾವತಿಯಂತೂ ದಿಗ್ಭ್ರಾಂತಳಾಗಿ ತನ್ನ ಮಗನತ್ತ ನೋಡತೊಡಗಿದಳು. ಭರತನನ್ನು ಒಂದೆಡೆ ಕುಳ್ಳಿರಿಸಲಾಯಿತು. ಅವನಾಡುವ ಮಾತುಗಳನ್ನು ವೀಡಿಯೋ ರೆಕಾರ್ಡ್ ಮಾಡಿಕೊಳ್ಳುವ ವ್ಯವಸ್ಥೆಯೂ ಆಯಿತು. ಅವನು ತಂದೆ ಪುರುಷೋತ್ತಮರನ್ನು ಉದ್ದೇಶಿಸಿ ಮಾತನಾಡತೊಡಗಿದ್ದ.

ಕೊಲೆಪಾತಕಿ ಭರತ

'ಪಪ್ಪ, ನಿಮ್ಗೆ ನೆನಪಿದ್ಯಾ? ಈಗ ಎರಡು ವರ್ಷಗಳ ಹಿಂದೆ ನಾನು ಬಳ್ಳಾರಿಯ ಮೆಡಿಕಲ್ ಕಾಲೇಜಿಗೆ ಎಷ್ಟು ಸಂಭ್ರಮದಿಂದ ಹೊರಟಿದ್ದೆ....! ಅಕ್ಕ ಋತುವಂತೂ ನನ್ನ ಗೋಳು ಹೊಯ್ದುಕೊಳ್ಳುತ್ತಲೇ ಇದ್ದಳಲ್ಲ, ಆದ್ರೆ ಆ ಸಂಭ್ರಮವೆಲ್ಲಾ ನೀವು ನನ್ನ ಅಲ್ಲಿನ ಹಾಸ್ಟೆಲ್ಲಿಗೆ ಬಿಟ್ಟು ಬಂದಾಗ್ಲೇ ಮುಗಿದು ಹೋಗಿತ್ತು. ಆ ಹಾಸ್ಟೆಲ್ಲಿನ ನನ್ನ ರೂಂ ಮೇಟ್ ಸೇರಿ ಐದಾರು ಹುಡುಗರು ನನ್ನ ರ್‍ಯಾಗಿಂಗ್ ಮಾಡೋಕೆ ಶುರು ಮಾಡಿದ್ರು. ಅದೂ ಎಂಥ ರ್‍ಯಾಗಿಂಗ್ ಅದು....ನೆನಪಿಸಿಕೊಂಡ್ರೆ ಈಗ್ಲೂ ನನ್ನ ಮೈ ನಡುಗುತ್ತೆ, ನನ್ನ ಬೆತ್ತಲು ಮಾಡಿ ನೀರಿನ ತೊಟ್ಟಿಯಲ್ಲಿ ಮುಳುಗಿಸ್ತಿದ್ರು, ಅಷ್ಟೇ ಅಲ್ಲ ಅಪ್ಪ, ಆ ಬದ್ಮಾಶ್‌ಗಳು ನನ್ನೊಂದಿಗೆ ಸಲಿಂಗಕಾಮ ನಡೆಸ್ತಿದ್ರು, ಮತ್ತೊಬ್ರು ಅದನ್ನು ಮೊಬೈಲಿನಲ್ಲಿ ವೀಡಿಯೋ ರೆಕಾರ್ಡ್ ಮಾಡ್ತಿದ್ರು, ಈ ಎಲ್ಲಾ ವಿಷ್ಯಗಳನ್ನು ಕಾಲೇಜಿನ ಮ್ಯಾನೇಜ್ಮೆಂಟಿನವರ ಮುಂದಾಗಲೀ, ಅಥವಾ ಇತರ ವಿದ್ಯಾರ್ಥಿಗಳ ಮುಂದಾಗಲೀ ಬಾಯ್ಬಿಟ್ಟರೆ ಆ ವೀಡಿಯೋಗಳನ್ನು ಎಲ್ಲರಿಗೂ ತೋರಿಸಿ ಮಾನ ಕಳೆಯುವುದಾಗಿ ಹೆದರಿಸ್ತಿದ್ರು. ಆ ಚಿತ್ರಹಿಂಸೆಯಲ್ಲಿ 15 ದಿನಗಳು ಕಳೆಯೋದ್ರೊಳಗೆ ನಂಗೆ ಸಾಕು ಸಾಕಾಯ್ತು. ಹೇಳ್ದೆ ಕೇಳ್ದೆ ರಾತ್ರೋ ರಾತ್ರಿ ಬೆಂಗಳೂರಿನ ಬಸ್ಸನ್ನು ಹತ್ತಿದ್ದೆ. ಬಂಗಲೆಗೆ ಹಿಂದಿರುಗೆ ಮೇಲೂ ಇದೇ ವಿಷಯ ನನ್ನ ತಲೆ ಕೊರೆಯತೊಡಗಿತ್ತು. ಅವರೆಲ್ಲರ ವಿಕೃತ ಹಿಂಸೆಗೆ ಬಲಿಯಾದ ಈ ದೇಹದ ಮೇಲೆಯೇ ಜಿಗುಪ್ಸೆ ಶುರುವಾಯ್ತು. ಯಾರೊಂದಿಗೂ ಮಾತು ಬೇಕೆನಿಸಲಿಲ್ಲ. ಹಾಗಾಗಿ ಮೌನಿಯಾಗ ತೊಡಗಿದೆ. ರಾತ್ರಿ ಎಲ್ಲರೂ ಮಲಗಿದ ಮೇಲೆ ಒಮ್ಮೊಮ್ಮೆ ಬಾಲ್ಕನಿಯ ಮೂಲಕ ಹೊರಗೆ ಹೋಗಿ ಬರಲು ಆರಂಭಿಸಿದೆ. ಹಾಗೆ ಆಗಾಗ ಹೋದಾಗ ಕಾಲೇಜು ವಿದ್ಯಾರ್ಥಿಗಳು ಕಣ್ಣಿಗೆ ಬಿದ್ದರೆ ನನ್ನ ಸಿಟ್ಟು ತಾರಕಕ್ಕೇರಿ ಅವರ ರಕ್ತ ಕುಡಿದು ಅವರನ್ನು ಕೊಲ್ಲಬೇಕೆಂಬ ಹಂಬಲ ಆಗಾಗ ಮನಸ್ಸಿಗೆ ಬರತೊಡಗಿತ್ತು. ಇದು ತಪ್ಪೆನಿಸಿದರೂ ನನ್ನ ಮನಸ್ಸನ್ನು ನಾನು ಕಂಟ್ರೋಲ್ ಮಾಡಿಕೊಳ್ಳಲು ಸಾಧ್ಯವಾಗ್ಲೇ ಇಲ್ಲ. ಆಗಾಗ ರಸ್ತೆಯಲ್ಲಿ ಒಂಟಿಯಾಗಿ ಕಣ್ಣಿಗೆ ಬೀಳುವ ಹದಿಹರೆಯದ ವಿದ್ಯಾರ್ಥಿಗಳನ್ನು